**ರಜಿಯಾ ಇದ್ದಕ್ಕಿದ್ದಂತೆ ಘನಗಂಭೀರರಾಗಿ ಸಬೀನಾಳನ್ನು ನೋಡುತ್ತ 'ನೀನು ಬುರ್ಖಾ ತೊಡೂದು ಇಲ್ಲ?' ಕೇಳಿದರು. ಸಬೀನಾ ಅಷ್ಟೇ ನಯವಾಗಿ 'ಬುರ್ಖಾ ಮನೇಲಿ ಇದೆ ಮೇಡಂ, ಆದ್ರೆ ಸ್ವಲ್ಪ ಹರ್ದಿದೆ' ಅಂದಳು.**

ಬೇಡ ಅಂತ ಮೇಡಂ ಎಚ್ಚರಿಕೆ ವಹಿಸಿದರು ಅಂತ ನಾನಂದುಕೊಂಡೆ, 'ತಂಗೆ ಮೂವತ್ತೆಂಟು ವರ್ಷ ವಯಸ್ಸು, ಮೊದ್ಲ ಗಂಡನಿಂದ ಐದು ವರ್ಷದ ಒಂದು ಮಗು ಇದೆ ಅಂತ ದೂರ್ನಲ್ಲಿ ದಾಖಲ್ಸಿದಾಳೆ' ಅಂತೇನೋ ಕೇಸಿನ ಬಗ್ಗೆ ಹೇಳತೊಡಗಿದರು ಸಿಸ್ಟರ್ ಡೇಸಿ, ಅಷ್ಟೇ ಹೊತ್ತಿಗೆ ಶಾಂತಮ್ಮ ಒಳಬಂದು, 'ಹಮೀದ್ ಅಂತ ಒಬ್ರು ನಿಮ್ಮ ಬಳಿ ಅರ್ಜಂಟ್ ಮಾತಾಡಬೇಕಂತೆ' ಅಂದಿದಕ್ಕೆ ಅವರು, 'ಮೀಟಿಂಗ್ ನಡೀತಿದೆ, ಬೇರೆ ಯಾರಿಗೂ ಪ್ರವೇಶ ಇಲ್ಲ ಅಂತ ಹೇಳು' ಅಂದರು. 'ಅದೇ ಹಮೀದ್ ಇರ್ಬೇಕು ಮೇಡಂ, ಕಬ್ಬಿಣ ಫ್ಯಾಕ್ಟರಿ ಮಾಲೀಕ' ಅಂತ ಮುಗುಳ್ನಕ್ಕರು ಡೇಸಿ. ಮೇಡಂ ಶಾಂತಮ್ಮನ ಕಡೆ ತಿರುಗಿ, 'ಇಲ್ಲ ನಾವು ಕೇಸ್ ಸ್ಟಡಿ ಮಾಡುವ ಮೊದಲು ಒಳಬಿಟ್ಟುಕೊಳ್ಳೋದಿಲ್ಲ ಅಂತ ಹೇಳು ಅವರಿಗೆ' ಅನ್ನುತ್ತಲೇ ಇನ್ನೊಮ್ಮೆ ನೀರು ಕುಡಿದರು.

ಶಾಂತಮ್ಮ ಬರುವಾಗ ತೆರೆದಿಟ್ಟು ಬಂದ ಬಾಗಿಲಿಂದ ವ್ಯಕ್ತಿಯೊಬ್ಬ ಆಗಲೇ ಒಳ ಬಂದು ನಿಂತದ್ದಕ್ಕೆ ನಾವೆಲ್ಲ ಗಲಿಬಿಲಿಗೊಂಡೆವು. 'ಯಾರಪ್ಪ ನೀನು?' ಅಂತ ಮೇಡಂ ದುರುಗುಟ್ಟಿಕೊಂಡು ಕೇಳಿದ್ದೇ, 'ನಾನೇ ಮೇಡಂ ಹಮೀದ್ ಅಂತ, ನನ್ನ ಮೇಲೆಯೇ ಆಕೀ ಸುಳ್ಳು ದೂರು ಕೊಟ್ಟಿದ್ದು' ಅಂತ ಕೈಮುಗಿದು ವಿಧೇಯತೆ ಮೆರೆದ. ತಕ್ಷಣ ನಾವು ಮೂವರೂ ಒಟ್ಟಿಗೇ ಆ ಮಹಾಶಯನನ್ನು ದುರುಗುಟ್ಟಿದೆವು. ಮೇಡಂ, 'ನಾವು ಹೇಳಿ ಕಳುಹಿಸದೇ ನೀವು ಹೀಗೆಲ್ಲ ನುಗ್ಗಬಾರದಪ್ಪ, ನಿಮ್ಮದೇ ಕೇಸನ್ನು ಸ್ಟಡಿ ಮಾಡ್ತಿದ್ದೇವೆ, ಕರೆದಾಗ ಬನ್ನಿ, ಹೊರಗಡೆ ವೇಟಿಂಗ್ ಕೊಠಡಿಯಲ್ಲಿ ಕೂತಿರಿ, ಇನ್ನೊಬ್ರು ಯಾರು ಅದೋ ಅಲ್ಲಿ ಕಾರಿನಲ್ಲಿ ನಿಮ್ಮ ಜೊತೆ ಬಂದವರು?' ಅಂತ ಇನ್ನಷ್ಟು ಕೋಪದಲ್ಲಿ ಕೇಳಿದರು ಮೇಡಂ. 'ಅವರು... ಅವರು...' ಅಂತ ತಡವರಿಸುತ್ತ ಹಮೀದ್, 'ಅವರು ನಮ್ಮ ಕಾರಿನ ಡ್ರೈವರ್ ಮೇಡಂ' ಅಂದ. 'ಹೌದೇ? ಇಲ್ಲಿ ನಿಮ್ಮ ವಕೀಲರನ್ನು ಕರೆತಂದಿಲ್ಲವಷ್ಟೇ? ಹೌದು, ನಿನ್ನೆ ಯಾಕೆ ನಿಮ್ಮ ವಕೀಲರಿಂದ ನನಗೆ ಕಾಲ್ ಮಾಡಿಸಿದ್ರಿ? ತಲೆಗಿಲೆ ಕೆಟ್ಟಿದೆಯೆನ್ರೀ ನಿಮಗೆ? ಅಷ್ಟು ಸೌಜನ್ಯ ಬೇಡ? ಇದೇನು ಕೋರ್ಟು ಅಂತ ಮಾಡಿದಿರೇನ್ರೀ? ನಿಮ್ಮ ವಕೀಲರಿಗೆ ಇಲ್ಲಿ ಎಂಟ್ರಿ ಇಲ್ಲ, ದಯವಿಟ್ಟು ಅವರ ಜೊತೆ ಬಂದಿದ್ರೆ ವಾಪಸ್ ಕಳಿಸಿ, ಕಾನೂನಿನ ವಿಷಯ ಬಂದರೆ ನಾನು ಮ್ಯಾನೇಜ್ ಮಾಡ್ತೇನೆ. ನಾನೂ ಲಾ ಓದಿದವಳೇ, ನಮ್ಮದು ದೂರು ನಿವಾರಣಾ ಕಮಿಟಿ, ದೂರು ಕೊಟ್ಟವಳಿಗೆ ಏನು ತೊಂದರೆ ಇದೆ ಅಂತ ವಿಚಾರಣೆ ಮಾಡುವುದಷ್ಟೇ ನಮ್ಮ ಕೆಲಸ' ಅಂದರು. ಅದಕ್ಕಾತ, 'ನೀವು ವಿಚಾರಣೆ ಮಾಡ್ರಿ, ನಂದೇನೂ ತಕರಾರಿಲ್ಲ; ಆದ್ರೆ ನಂದೊಂದು ರಿಕ್ವೆಸ್ಟ್ ಐತ್ರಿ ಮೇಡಂ, ಆಕಿ ಇಲ್ಲಿ ಇದ್ದಾಗ ದಯಮಾಡಿ ನನ್ನ ಆಕೀ ಮುಂದ ಕರೆಸಬ್ಯಾಡ್ರಿ, ನಿಮಗ ಕೈ ಮುಗೀತೇನಿ ಮೇಡಂ, ನನಗ ಸತ್ರೂ ಆಕೀ ಮುಖಾ ನೋಡೂ ಮನಸ್ಸಿಲ್ಲ' ಅಂತ ಕೈಮುಗಿದು ಗೋಗರೆಯುತ್ತ ಕೇಳಿಕೊಂಡ. 'ಆಯ್ತು ಆಯ್ತು ಸೆಪ್ರೇಟ್ ಆಗೇ ಕೌನ್ಸಿಲಿಂಗ್ ತೊಗೋತೇವೆ ಈಗ ಹೋಗಿ' ಅಂದರು ರಜಿಯಾ, ನಡುವೆ ನಾನು ಬಾಯಿ ಹಾಕಿ, 'ಪ್ರತ್ಯೇಕ ಕೌನ್ಸಿಲಿಂಗ್ ಮಾಡಿದರೆ, ಅವಳ ತಪ್ಪು ಇವರು, ಇವರ ತಪ್ಪು ಅವಳು ಹೇಳುವುದನ್ನು ನಾವು ಬ್ಲೈಂಡ್ ಆಗಿ ಕೇಳುತ್ತಲೇ ಕೂಡಬೇಕಾದೀತು' ಅಂದದಕ್ಕೆ ಮೇಡಂ, 'ಇರಲಿ, ಅವರ ಸದ್ಯದ ಮನಃಸ್ಥಿತಿಯನ್ನೂ ನಾವು ಗಮನಿಸಬೇಕಲ್ಲ?' ಅಂದರು. ಅದನ್ನು